

# ಕ್ರಿಕೆಟ್‌ನ ನವತಾರೆ

ಪ್ರವೀಣ ಕುಲಕರ್ಣಿ

ಕ್ರಿಕೆಟ್ ಈಗ ಹಿಂದೆಂದೂ ಕಂಡಿರದ ಹೊಸದೊಂದು ಯುಗವನ್ನು ಪ್ರವೇಶಿಸಿದೆಯೇ? ಬೆಂಗಳೂರಿನಲ್ಲಿ ಕಳೆದ ವಾರ ತಮಿಳುನಾಡಿನ ತಾರೆ ನಾರಾಯಣ್ ಜಗದೀಶನ್ ಅವರ ಆಟವನ್ನು ಕಂಡವರು ತಮಗೆ ತಾವೇ ಹಾಕಿಕೊಂಡ ಪ್ರಶ್ನೆ ಇದು. ಜಗದೀಶನ್ ಕಾರಣದಿಂದ ಆ ಪಂದ್ಯ ಎಷ್ಟೊಂದು ಹೊಸ ದಾಖಲೆಗಳನ್ನು ಬರೆಯಿತು ಗೊತ್ತೆ? ಲಿಸ್ಟ್ 'ಎ' (50 ಓವರ್‌ಗಳ) ಪಂದ್ಯಗಳಲ್ಲಿ ಅತ್ಯಧಿಕ ಮೊತ್ತ (277 ರನ್, 141 ಎಸೆತಗಳಲ್ಲಿ) ದಾಖಲಿಸಿದ ಶ್ರೇಯವನ್ನು ತಮ್ಮ ಹೆಸರಿಗೆ ಬರೆಯಿಸಿಕೊಂಡ ಈ ಆಟಗಾರ, ಗರಿಷ್ಠ ಮೊತ್ತದ ಜೊತೆಯಾಟದಲ್ಲೂ ಪಾಲ್ಗೊಂಡರು. ತಂಡಕ್ಕೆ ದಾಖಲೆಯ ರನ್‌ಗಳ ಅಂತರದ ಜಯವನ್ನೂ ತಂದುಕೊಟ್ಟರು. ಜಗದೀಶನ್ ಅವರ ಸಾಧನೆಯವರೆಗೆ, ಬ್ಯಾಟ್ಸ್‌ಮನ್ ಒಬ್ಬ ಪೇರಿಸಿದ ಗರಿಷ್ಠ ಮೊತ್ತದ ದಾಖಲೆ ಅಲಿಸ್ಟೇರ್ ಬ್ರೌನ್ ಅವರ (268) ಹೆಸರಿನಲ್ಲಿ ಇತ್ತು.

ವಿಜಯ್ ಹಜಾರೆ ಟ್ರೋಫಿ ಟೂರ್ನಿಯಲ್ಲಿ ಜಗದೀಶನ್ ಈ ಸಾಧನೆಯನ್ನು ಮಾಡಿರುವುದು, ಮೂರ್ನಾಲ್ಕು ವರ್ಷಗಳ ಹಿಂದೆಯಷ್ಟೇ ಪ್ರಥಮದರ್ಜೆ ಕ್ರಿಕೆಟ್‌ಗೆ ಕಾಲಿಟ್ಟಿರುವ ಅರುಣಾಚಲ ಪ್ರದೇಶ ತಂಡದ ವಿರುದ್ಧ. ಆದರೆ, ಈ ದಾಖಲೆಗೆ ತನ್ನದೇ ಆದ ಮಹತ್ವವಿದೆ. ಲಿಸ್ಟ್ 'ಎ' ಪಂದ್ಯವೊಂದರಲ್ಲಿ 500ಕ್ಕಿಂತ ಹೆಚ್ಚಿನ ಮೊತ್ತ ಪೇರಿಸಿದ ಮೊದಲ ತಂಡವಾಗಿ ತಮಿಳುನಾಡು ಚರಿತ್ರೆ ಪುಟ ಸೇರಿದ ಪಂದ್ಯವೂ ಇದಾಗಿತ್ತು. 435 ರನ್‌ಗಳ ಅಂತರದಿಂದ ಈ ತಂಡ ಪಂದ್ಯ ಜಯಿಸಿದ್ದು ಕೂಡ ಹೊಸ ದಾಖಲೆಯಾಗಿ ಕ್ರಿಕೆಟ್ ಪುಸ್ತಕದಲ್ಲಿ ಸೇರ್ಪಡೆಯಾಯಿತು. ಸಮರ್‌ಸೆಟ್ ತಂಡ 346 ರನ್‌ಗಳಿಂದ ಡೆವೊನ್ ತಂಡವನ್ನು ಸೋಲಿಸಿದ್ದು ಇದುವರೆಗಿನ ಅತಿದೊಡ್ಡ ಗೆಲುವಿನ ದಾಖಲೆಯಾಗಿತ್ತು. ಜಗದೀಶನ್ ಮತ್ತು ಬಿ. ಸಾಯಿ ಸುದರ್ಶನ್ ಸೇರಿ ಮೊದಲ ವಿಕೆಟ್‌ಗೆ 416 ರನ್ ಪೇರಿಸಿದ್ದು ಕೂಡ ಹೊಸ ದಾಖಲೆಯಾಗಿದೆ. ಲಿಸ್ಟ್ 'ಎ' ಪಂದ್ಯಗಳಲ್ಲಿ ಯಾವುದೇ ವಿಕೆಟ್ ಜತೆಯಾಟದ ಅತ್ಯಂತ ಗರಿಷ್ಠ ಮೊತ್ತ ಇದಾಗಿದೆ.

'ನಿಮ್ಮ ಯಶಸ್ಸಿನ ಗುಟ್ಟೇನು' ಎಂದು ಕೊಯಮತ್ತೂರಿನ ಈ ಹುಡುಗನನ್ನು ಕೇಳಿದರೆ ಅವರು ಕೊಡುವ ಉತ್ತರ ತೀರಾ ಸರಳವಾಗಿದೆ. 'ಅಂಗಳದಲ್ಲೇ ಉಳಿದು, 50 ಓವರ್‌ಗಳವರೆಗೆ ಆಡಬೇಕು ಎನ್ನುವುದೊಂದೇ ನನ್ನ ಮಂತ್ರವಾಗಿರುತ್ತದೆ' ಎಂದು ಅವರು ಹೇಳುತ್ತಾರೆ. ತಂಡದ ಸಹ ಆಟಗಾರರ ಪಾಲಿಗೆ ನೆಚ್ಚಿನ 'ಜಗ್ಗಿ' ಆಗಿರುವ ಈ ಆರಂಭಿಕ ಆಟಗಾರ, 'ವಿಶ್ವದಾಖಲೆಯಿಂದ ಸಹಜವಾಗಿಯೇ ಸಂತಸವಾಗಿದೆ. ಆದರೆ, ಅರುಣಾಚಲ ಪ್ರದೇಶದ ವಿರುದ್ಧ ಬಂದ ಈ ದ್ವಿಶತಕಕ್ಕಿಂತ ಹರಿಯಾಣ ವಿರುದ್ಧ ಬಂದ ಶತಕವೇ ನನಗೆ ಹೆಚ್ಚು ಅಚ್ಚುಮೆಚ್ಚು' ಎಂದು ವಿವರಿಸುತ್ತಾರೆ.

ಸತತ ಐದು ಶತಕ ಬಾರಿಸಿದ ಹಿರಿಮೆಯನ್ನೂ ಹೊಂದಿರುವ ಅವರು, ತಮಿಳುನಾಡು ತಂಡಕ್ಕೆ ಆಯ್ಕೆಯಾಗಿ ಈಗಾಗಲೇ ಆರು ವರ್ಷಗಳಾಗಿವೆ. ತಮ್ಮ ತಂಡಕ್ಕೆ ದಿನೇಶ್ ಕಾರ್ತಿಕ್ ಅವರ ಲಭ್ಯತೆ ಇದ್ದಾಗಲೆಲ್ಲ ತಂಡದ ಪ್ರಮುಖ ಆಟಗಾರನಿಗೆ ಜಾಗ ಮಾಡಿಕೊಡಲು ಜಗದೀಶನ್ ಕೆಳಕ್ರಮಾಂಕದಲ್ಲಿ ಆಡಬೇಕಿತ್ತು. ಇಲ್ಲವೆ 12ನೇ ಆಟಗಾರನಾಗಿ ಬೆಂಚ್‌ನಲ್ಲಿಯೇ ಕೂರಬೇಕಿತ್ತು. ಇದ್ಯಾವುದಕ್ಕೂ ತಲೆ ಕೆಡಿಸಿಕೊಳ್ಳದ ಅವರು ಬ್ಯಾಟಿಂಗ್ ತಂತ್ರಗಾರಿಕೆ, ಕೀಪಿಂಗ್ ಕೌಶಲಕ್ಕಾಗಿ ತುಂಬಾ ಸಮಯ ಮೀಸಲಿಟ್ಟರು. ದೈಹಿಕ ಸಾಮರ್ಥ್ಯ ಹೆಚ್ಚಿಸಿಕೊಳ್ಳುವ ಕಡೆಗೂ ವಿಶೇಷ ಗಮನಹರಿಸಿದರು.

ಕೊಯಮತ್ತೂರಿನಂತಹ ಊರಿನಿಂದ ಚೆನ್ನೈಗೆ ಬಂದು ನೆಲೆ ನಿಲ್ಲುವುದೂ ಸುಲಭದ ಮಾತಾಗಿರಲಿಲ್ಲ. ಎಲ್ಲ ಅಡೆತಡೆಗಳನ್ನು ಮೆಟ್ಟಿನಿಂತ ಅವರು, ಸಿಕ್ಕ ಅವಕಾಶವನ್ನು ಚೆನ್ನಾಗಿ ಬಳಸಿಕೊಂಡರು. ಅದರ ಪರಿಣಾಮವೇ ಅವರು ಈಗ ಕಾಣುತ್ತಿರುವ ಯಶಸ್ಸು.

'ಐವತ್ತು ಓವರ್‌ಗಳವರೆಗೆ ಬ್ಯಾಟ್ ಹಿಡಿದು ನಿಂತ ಬಳಿಕ ಕೀಪಿಂಗ್ ಹೊಣೆಯನ್ನು ನಿಭಾಯಿಸುವುದು ಕಷ್ಟವಲ್ಲವೇ' ಎಂದು ಕೇಳಿದರೆ, 'ಹಾಗೇನಿಲ್ಲ. ದೈಹಿಕ ಸಾಮರ್ಥ್ಯ ಕಾಯ್ದುಕೊಳ್ಳುವುದರಿಂದ ನಾನು ಕೀಪಿಂಗ್ ಮಾಡುವುದನ್ನೂ ಆನಂದಿಸುವೆ' ಎಂದು ಉತ್ತರಿಸುತ್ತಾರೆ. ಅಂದಹಾಗೆ, ಐಪಿಎಲ್‌ನಲ್ಲಿ ಜಗದೀಶನ್ 'ಚೆನ್ನೈ ಸೂಪರ್ ಕಿಂಗ್ಸ್' ತಂಡದಲ್ಲಿದ್ದರು. ಆ ತಂಡದಿಂದ ಈಗ ಈ ಆಟಗಾರನನ್ನು ಬಿಡುಗಡೆ ಮಾಡಲಾಗಿದ್ದು, ಮುಂದಿನ ತಿಂಗಳು ನಡೆಯಲಿರುವ ಹರಾಜಿನಲ್ಲಿ ಅವರು ಬೇರೆ ತಂಡದ ಪಾಲಾಗುವ ಸಾಧ್ಯತೆ ಇದೆ.

ಜಗದೀಶನ್ ಅವರು ಈಗ ಭವಿಷ್ಯದ ಭಾರತೀಯ ಕ್ರಿಕೆಟ್ ತಾರೆಯಾಗಿ ಕಂಗೊಳಿಸುತ್ತಿದ್ದಾರೆ. ■